ಅ) ಚನ್ನಪಟ್ಟಣ ನಗರ ಹಾಗೂ ತಾಲ್ಲೂಕಿನಲ್ಲಿ ಪ್ರತಿ ದಿನ ಅಗ್ನಿ ಅನಾಹುತಗಳು ಹೆಚ್ಚುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ ? ಹಾಗಿದ್ದಲ್ಲಿ ಅಲ್ಲಿ ಅಗ್ನಿ ಶಾಮಕ ಠಾಣೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಇದೆಯೇ ? ಅದನ್ನು ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) ಸರ್ಕಾರದ ಗಮನಕ್ಕೆ ಬಂದಿದೆ. ಇದೆ 1990–91 ನೇ ಆರ್ಥಿಕ ಸಾಲಿನಲ್ಲಿ ಚನ್ನಪಟ್ಟಣ ಹಾಗೂ ರಾಮನಗರಗಳ ನಡುವೆ ಒಂದು ಅಗ್ನಿ ಶಾಮಕ ಠಾಣೆಯನು ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ :– ರಾಜ್ಯದಲ್ಲಿರುವ ಅಕ್ಕಿ ಗಿರಣಿಗಳು ಮತ್ತು ಎಣ್ಣೆ ಗಿರಣಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 817 (1001)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಕ್ಕಿ ಗಿರಣಿಗಳು ಮತ್ತು ಎಣ್ಣೆ ಗಿರಣಿಗಳು ಎಷ್ಟು ?

ಆ) ಒಟ್ಟು ಮಂಜೂರಾದ ಅಕ್ಕಿ ಗಿರಣಿಗಳ ಮತ್ತು ಎಣ್ಣೆ ಗಿರಣಿಗಳ ಲೈಸೆನ್ಸ್‌ಗಳು ಎಷ್ಟು ?

ಇ) ಸರ್ಕಾರದ ವತಿಯಿಂದ ಹೊಸದಾಗಿ ಅಕ್ಕಿ ಮತ್ತು ಎಣ್ಣೆ ಗಿರಣಿಗಳಿಗೆ ಲೈಸೆನ್ಸ್ ನೀಡಲಾಗುತ್ತಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಅಕ್ಕಿ ಗಿರಣಿಗಳು 10829, ಎಣ್ಣೆ ಗಿರಣಿಗಳು 372

ಆ) ಅಕ್ಕಿ ಗಿರಣಿಗಳು 10924, ಎಣ್ಣೆ ಗಿರಣಿಗಳು 372.

ಇ) ಹೌದು. ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಜಾರಿಯಲ್ಲಿರುವ ಕಾನೂನು ರೀತಿಯಂತೆ ಪರವಾನಿಗೆಗಳನ್ನು ನೀಡುವ ಅಧಿಕಾರ ಉಳ್ಳವರಾಗಿದ್ದಾರೆ.

ಅಧ್ಯಕ್ಷರು :– ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡಲಾಗಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2) ನೇ ಪರಿಚ್ಛೇದದ ಮೇರೆಗೆ ಭಾರತ ನಿಯಂತ್ರಕ ಹಾಗೂ ಮಹಾಲೇಖಾಪಾಲಕರವರ 31 ನೇ ಮಾರ್ಚ್ 1988ರ ವರೆಗಿನ ಹಣ ವಿನಿಯೋಗ, ವಿತ್ತೀಯ ಲೆಕ್ಕಪತ್ರಗಳ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದಿಡಲಾಯಿತು.

2) ಶ್ರೀ ಧರ್ಮಸಿಂಗ್ (ಗೃಹ ಮಂತ್ರಿ) :– ಮಾನ್ಯ ಅಧ್ಯಕ್ಷರೆ, 1952ನೇ ಇಸವಿಯ ವಿಚಾರಣಾ ಆಯೋಗದ ಶಾಸನದ 3 (4) ನೇ ಕಲಮಿನ ಮೇರೆಗೆ–

ಅ) ಚಿಂಚೋಳಿಯಲ್ಲಿ ನಡೆದ ಅಶ್ರುವಾಯು ಬಗ್ಗೆ ವಿಚಾರಣಾ ಆಯೋಗದ ವರದಿಯನ್ನು, ಹಾಗೂ

ಆ) ಬೀದರ್‌ನಲ್ಲಿ ನಡೆದ ಹಿಂಸಾತ್ಮಕ ಘಟನೆಗಳ ಬಗ್ಗೆ ವಿಚಾರಣಾ ಆಯೋಗದ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಸಭೆಯ ಮುಂದಿಡಲಾಯಿತು.

3) ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಹಾಗೂ ನಾಗರೀಕ ಸರಬರಾಜು ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಸಚಿವರ ಹೆಸರಿನಲ್ಲಿರತಕ್ಕಂಥ 1963 ನೇ ಇಸವಿಯ ಕೃಷಿ ವಿಶ್ವವಿದ್ಯಾನಿಲಯದ 38 (3) ನೇ ಕಲಮಿನ ಮೇರೆಗೆ–

1986–87 ನೇ ಸಾಲಿನ ಬೆಂಗಳೂರಿನ ಕೃಷಿವಿಶ್ವವಿದ್ಯಾನಿಲಯದ ಉತ್ತರಗಳೊಂದಿಗೆ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು :– ಕಾಗದ ಪತ್ರಗಳನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆ ಪ್ರಸ್ತಾಪಕ್ಕೆ ಅನುಮತಿ ಕೋರಿಕೆ

ವಿಷಯ :– ರಾಜ್ಯದಲ್ಲಿ ತಾಳೆ ಎಣ್ಣೆ ಸರಬರಾಜು ಮಾಡುವ ಬಗ್ಗೆ.

†ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) :– ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯ ರೂಪದಲ್ಲಿ ಒಂದು ವಿಚಾರವನ್ನು ನಾನು ಮತ್ತು ನನ್ನ ಸಹೋದ್ಯೋಗಿಗಳು ತಮಗೆ ಬರೆದಿದ್ದೇವೆ. ಆ ವಿಷಯವನ್ನು ಸಹಾ ಕಳುಹಿಸಿದ್ದೇವೆ. ಈ ರಾಜ್ಯದಲ್ಲಿ ಎಫ್. ಪಿ. ಡಿ. ಷಾಪ್‌ಗಳ ಮೂಲಕ ಬೆಂಗಳೂರು ನಗರ ಮತ್ತು ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ತಾಳೆ ಎಣ್ಣೆ ಸಿಗದೇ ಇರುವ ಬಗ್ಗೆ ಸರ್ಕಾರದ ಗಮನವನ್ನು ವಿಶೇಷವಾಗಿ ಮಾನ್ಯ ಆಹಾರ ಮಂತ್ರಿಗಳ ಗಮನವನ್ನು ಸೆಳೆಯಬೇಕು ಎನ್ನುವ ದೃಷ್ಟಿಯಿಂದಾಗಿ ಕಳುಹಿಸಿದ್ದೆವು. ಕಳೆದ ಎರಡು ತಿಂಗಳಿಂದ ತಾಳೆ ಎಣ್ಣೆ ಎಲ್ಲೂ ಸಿಗುತ್ತಿಲ್ಲ. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕಡಲೆಕಾಯಿಎಣ್ಣೆ ಒಂದು ಕೆ. ಜಿ. 36–38 ರೂಪಾಯಿ ಆಗಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಮತ್ತು ಕಳೆದ ವಾರ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟಿನಿಂದ ಒಂದು ಸರ್ಕ್ಯುಲರ್ ಬಂದಿದೆ. ಅದರಲ್ಲಿ ಮುಂದಿನ ತಿಂಗಳು ಸಹಿತ ಈ ತಾಳೆ ಎಣ್ಣೆ ಸಿಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದರಿಂದ ಬ್ಲಾಕ್ ಮಾರ್ಕೆಟರ್ಸ್‌ಗೆ ಬಹಳ ಅನುಕೂಲವಾಗುತ್ತದೆ. ಈಗಾಗಲೇ 38 ರೂಪಾಯಿ ಒಂದು ಕೆ. ಜಿ. ಕಡಲೆಕಾಯಿ ಎಣ್ಣೆಗೆ ಬೆಲೆ ಇದೆ. ಅದು 46–50 ರೂಪಾಯಿ ಆಗತಕ್ಕಂಥದ್ದು ಇದೆ. ಇದನ್ನು ಏನಾದರೂ ದಾಸ್ತಾನು ಮಾಡಿಕೊಂಡು ಕೆಲವರು ಇದನ್ನು ಬ್ಲಾಕ್ ಮಾರ್ಕೆಟಿಂಗ್ ಮಾಡಿ ಅಂದರೆ, ಹೋಲ್ಡಿಂಗ್ ಮಾಡಿ ಎಣ್ಣೆಯ ಬೆಲೆಯನ್ನು ಜಾಸ್ತಿ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆಯೇ ಅಥವಾ ಕೇಂದ್ರ ಸರ್ಕಾರದಿಂದ ನಮಗೆ ಬರುತ್ತಿರತಕ್ಕಂಥ ಎಣ್ಣೆಯ ಪ್ರಮಾಣ ಕಡಿಮೆಯಾಗಿದೆಯೇ ಅಥವಾ ವಿತರಣೆಯಲ್ಲಿ ಏನಾದರೂ ಆಗಿದೆಯೇ ? ಇದು ಬಹಳ ಮಹತ್ವವಾದ ವಿಚಾರ ಇದೆ. ಕೇವಲ ಬೆಂಗಳೂರು ನಗರ ಮೈಸೂರು ಇಂಥ ನಗರ ಪ್ರದೇಶಕ್ಕಷ್ಟೇ ಅಲ್ಲ, ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ರೇಷನ್ ಷಾಪ್ ಗಳಿಗೂ ಸಹಿತ ಎಣ್ಣೆಯ ಪ್ರಮಾಣವನ್ನು ಕಡಿಮೆ ಮಾಡುತ್ತೇವೆ ಎನ್ನತಕ್ಕಂಥ ವಿಚಾರವನ್ನು ಸಹಿತ ಹೇಳಿದ್ದಾರೆ., ಇದು ಒಂದು. ಎರಡನೆಯದಾಗಿ ಅನೇಕ ಎಫ್. ಪಿ. ಡಿ. ಗಳಲ್ಲಿ ಏನಾಗಿದೆ ಎಂದರೆ, ಟಿ. ಎ. ಪಿ. ಸಿ. ಎಂ. ಎಸ್ ನಲ್ಲಿ ಕೆಲವು ಕಡೆ ಅವರೇ ಹೋಲ್‌ಸೇಲ್ ಏಜೆನ್ಸಿಗಳನ್ನು ತೆಗೆದುಕೊಂಡಿದ್ದಾರೆ. ಎಣ್ಣೆಯನ್ನು ಅಕ್ಕಿಯನ್ನು, ಸಕ್ಕರೆಯನ್ನು ತೆಗೆದುಕೊಂಡು ಹೋಗಿ ಹಂಚತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಬಹುತೇಕ ಟಿ. ಎ. ಪಿ. ಸಿ. ಎಂ. ಎಸ್. ಗೆ ನನಗೆ ಇಷ್ಟು ಕೋಟಿ ರೂಪಾಯಿ ಎಂದು ನಿರ್ದಿಷ್ಟವಾಗಿ ಗೊತ್ತಿಲ್ಲ, ಅಂತೂ ಕೆಲವು ಕೋಟಿಗಷ್ಟು ಹಣ ಸರ್ಕಾರದಿಂದ ಹೋಗಬೇಕಾಗಿರುವುದರಿಂದ ಅವರು ಫುಡ್ಡನ್ನು ಲಿಫ್ಟ್ ಮಾಡುವುದನ್ನು ಸಹಿತ ನಿಲ್ಲಿಸಿದ್ದಾರೆ. ಫುಡ್ ಗೋಡೌನ್ನುಗಳಲ್ಲಿ, ಫುಡ್ ಕಾರ್ಪೋರೇಷನ್‌ನಲ್ಲಿ ಅಲ್ಲಲ್ಲೇ ಉಳಿದಿದೆ. ಈ ತಿಂಗಳಲ್ಲಿ ಇಡೀ ರಾಜ್ಯದಲ್ಲಿ ಬಹಳ ದೊಡ್ಡ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರ ತಕ್ಷಣ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಹಣ ರಿಲೀಸ್ ಮಾಡುವುದು ಒಂದು. ಎರಡನೆಯದು, ಪಾಮ್ ಆಯಿಲ್ ಸಪ್ಲೈ ಬಗ್ಗೆ ಏನಾಗಿದೆ ಎನ್ನುವುದ ಗೊತ್ತಾಗಬೇಕು.

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಸ್ನೇಹಿತರಾದ ಮಾನ್ಯ ಸಿಂಧ್ಯಾರವರು ಹೇಳಿದರು. ಈ ಸಮಸ್ಯೆ ಇವತ್ತು ಕೇವಲ ಬೆಂಗಳೂರು ನಗರಕ್ಕೆ ಅಥವಾ ಬೆಂಗಳೂರು ಗ್ರಾಮೀಣ ಪ್ರದೇಶಕ್ಕೆ ಅಷ್ಟೇ ಸೀಮಿತ ಅಲ್ಲ. ಇಡೀ ರಾಜ್ಯದಲ್ಲಿಯೇ ಇದೆ. ಬೆಳಗಾಂನಲ್ಲಿಯೂ ಇದೇ ಸಮಸ್ಯೆ ಇದೆ. ಉತ್ತರ ಕನ್ನಡದಲ್ಲಿಯೂ ಈ ಸಮಸ್ಯೆ ಇದೆ. ಇಲ್ಲಿ ಏನಾಗುತ್ತಿದೆ ಎಂದರೆ ಒಂದನೆಯದಾಗಿ ಎಣ್ಣೆ ಸರಿಯಾಗಿ ವಿತರಣೆಯಾಗುತ್ತಿಲ್ಲ. ಎಣ್ಣೆ ಇಲ್ಲ, ಎಣ್ಣೆ ಬಂದರೂ ಸರಿಯಾಗಿ ಎಣ್ಣೆ ವಿತರಣೆಯಾಗುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿರುವುದು ಏನೆಂದರೆ ಅವರು ಹೇಳಿದ ಹಾಗೆ ಇದು ಇವತ್ತಿನ ಸಮಸ್ಯೆ ಅಲ್ಲ. ಮಾರ್ಕೆಟಿಂಗ್ ಸೊಸಾಯಿಟಿಯವರು ಏನಿದ್ದಾರೆ ಅವರನ್ನು ಹೋಲ್‌ಸೇಲ್ ಏಜೆನ್ಸಿಗಳನ್ನಾಗಿ ಮಾಡಿದ್ದೇವೆ. ಅವರ ಮುಖಾಂತರ ಎಲ್ಲಾ ಫೇರ್ ಪ್ರೈಸ್ ಷಾಪ್ಸ್‌ಗೂ ಲಿಫ್ಟ್ ಆಗುತ್ತದೆ. ಆದರಲ್ಲಿ ಏನಾಗುತ್ತದೆ ಅಂದರೆ ಬಹಳಷ್ಟು ಕಡೆ ಹಳ್ಳಿಗಳಲ್ಲಿ ಫೇರ್ ಪ್ರೈಸ್ ಷಾಪ್ಸ್ ಮುಖಾಂತರ, ಸೊಸಾಯಿಟಿಗಳ ಮುಖಾಂತರ ಆಹಾರ ಧಾನ್ಯಗಳನ್ನು ಏನು ಡಿಸ್ಟ್ರಿಬ್ಯೂಷನ್ ಮಾಡುತ್ತಾರೆ. ಕೆಲವು ಸೊಸಾಯಿಟಿಗಳಲ್ಲಿ ಹಣ ಇಲ್ಲ. ಹಣ ಇಲ್ಲ ಎಂದು ಅವರು ಮಾರ್ಕೆಟಿಂಗ್ ಸೊಸಾಯಿಟಿಯಿಂದ ಆಹಾರ ಧಾನ್ಯಗಳನ್ನು ಅಥವಾ ಎಣ್ಣೆಯನ್ನು ತಂದು ವಿತರಣೆ ಮಾಡುತ್ತಿಲ್ಲ. ಆದ್ದರಿಂದ ಏನಾಗುತ್ತಿದೆ ಎಂದರೆ, ಹಳ್ಳಿಗಳಲ್ಲಿಯೂ ಸಿಗುತ್ತಿಲ್ಲ, ಆಯಿಲ್ ಸ್ಟಾಕ್ ಹಾಗೆಯೇ ಉಳಿಯುತ್ತದೆ; ಅದನ್ನು ಪುನಃ ಬ್ಲಾಕ್ ರೇಟ್‌ನಲ್ಲಿ ಪಟ್ಟಣದಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದರ ಸಲುವಾಗಿ